ಸಾಯೋ ವಯಸ್ಸೆ ತಾನೆ? ಬಿಟ್ಹಾಕು. ಇದ್ಕೂ ಮಿಂಚಿ ಮುಂದೆ ವೋದ್ಳೋ...' ಎಂದು ಗದರಿದ್ದ. ಅವಳಿಗೂ ಬೇರೆ ದಾರಿ ಕಾಣದೆ ಇದ್ದಷ್ಟು ದಿವಸ ಇರಲಿ ಎಂದು ಮನೆಗೆ ಕರೆದುಕೊಂಡು ಬಂದಿದ್ದಳು. ಇದಾದ ಒಂದು ತಿಂಗಳಿಗೆ ರಂಗಜ್ಜಿ ಓಡಾಡುವ ಚೈತನ್ಯವನ್ನೂ ಕಳೆದುಕೊಂಡು ಹಾಸಿಗೆ ಹಿಡಿದಿರುವುದು.

ಕುಸುಮ ಇನ್ನೂ ಬೀಸುತ್ತಲೇ ಇದ್ದಳು. ನೊಣಗಳು ಬಾಯಿ, ಮೂಗು, ಕಣ್ಣು, ಹೀಗೆ ಎಲ್ಲಿ ಹಿತವೆನಿಸುತ್ತೋ ಅಲ್ಲೆಲ್ಲಾ ಕೂರುವುದು ಮತ್ತೆ ಗಾಳಿಯ ಬೀಸಿಗೆ ಹಾರುವುದು ನಡೆದೇ ಇತ್ತು. ಕುಸುಮ ಹಾಗೆ ಬೀಸುತ್ತಿರುವ ಹೊತ್ತಿಗೆ ಅದೇ ದಿಕ್ಕಿನಲ್ಲಿ ಹಾರಿಕೊಂಡು ಬಂದ ಏರೋಪ್ಲೇನ್ ಚಿಟ್ಟೆ ರಟ್ಟೆಗೆ ಬಡಿದು ರಂಗಜ್ಜಿಯ ಎದೆಯ ಮೇಲೆ ಉರುಳಿತು. ಅವಳಿಗೆ ಎದೆಯನ್ನು ಯಾರೋ ಹಿಡಿದ ಹಾಗಾಯಿತು. ಮೂಗು ಬಾಯನ್ನು ಅದುಮಿ ಹಿಡಿದಿರುವರೇನೋ ಎಂಬಂತೆ ಉಸಿರು ಕಟ್ಟತೊಡಗಿತು. ತುಸು ಕೊಸರಾಡಿದ ಅವಳು ನಂತರ 'ಲೆ ಕುಸ್ಮ, ಎದೆ ಮೇಕೆ ಏನೋ ಅನಿಷ್ಟ ಬಿದ್ದಂಗಾತು... ವಸಿ ನೋಡು, ಏನದು?' ಎಂದು ನುಡಿದಳು. ಕುಸುಮ 'ಅಯ್ಯೋ ಅಜ್ಜೀ, ಅದು ತೂನಿಕತ್ತಿ. ನಮ್ಮೂರು ಸುತ್ತುಮುತ್ತ ಜಾಸ್ತಿ ಆರಾಡ್ತಿವೆ' ಎಂದುತ್ತರಿಸಿ ಇನ್ನೂ ರಂಗಜ್ಜಿಯ ಎದೆಯ ಮೇಲೇ ಇದ್ದ ಏರೋಪ್ಲೇನ್ ಚಿಟ್ಟೆಯ ರೆಕ್ಕೆಯನ್ನು ಹಿಡಿದು ಆಚೆ ಬೀಸಿದಳು. ಅದು ಗಾಸಿಗೊಂಡಿತ್ತು. ಗಾಳಿಯಲ್ಲಿ ವಕ್ರವಕ್ರವಾಗಿ ತೇಲುತ್ತಾ ಬಿಸಿಲ ಕಸುವನ್ನು ಹೀರಿಕೊಂಡು ಬಲಗೊಳ್ಳುತ್ತಾ ಸಾಗಿತು. ರಂಗಜ್ಜಿ ಒಂದು ಬಾರಿ ಉಸಿರನ್ನು ಜೋರಾಗಿ ಎಳೆದುಕೊಂಡಳು. ತನ್ನೊಡಲಿನದ್ದೋ ಹಾಸಿಗೆಯದ್ದೋ ಗಬ್ಬುನಾತ ಆವರಿಸಿದ ಹಾಗಾಯಿತು. ಅವಳು ಕುಸುಮಳ ಕಡೆ ನೋಡಿದಳು. ಅವಳು ಬೀಸುವುದನ್ನು ನಿಲ್ಲಿಸಿ ಒಳಗೆ ನಡೆದಳು. ಪಕ್ಕದ ಮನೆಯ ಎದುರಿನ ಕರೆಂಟು ಕಂಬದ ಮೇಲೆ ಕುಳಿತಿರುವ ಕಾಗೆಯೊಂದು ಒಂದೇ ಸಮನೆ ಕಾ... ಕಾ... ಎಂದು ಕೂಗತೊಡಗಿತು. ಅದೇ ವೇಳೆಗೆ ಅಲ್ಲಿಗೆ ಬಂದ ಕೃಷ್ಣಾರೆಡ್ಡಿ ಹೆಗಲ ಮೇಲಿದ್ದ ಟವಲನ್ನು ಹಿಡಿದು ಅದರ ಕಡೆಗೆ ಬೀಸಿದಂತೆ ಮಾಡಿ 'ಅನಿಷ್ಟದ್ದು, ನಮ್ಮನೆತಾವೆ ಬಂದು ಕಿರುಚಬೇಕ' ಎಂದು ಗೊಣಗಿದ. ಅದು ಅಲ್ಲಿಂದ ಹಾರಿ ಎದುರು ಮನೆಯ ಮೇಲೆ ಕೂತು ಮತ್ತೆ ಕಾ... ಕಾ... ಅನ್ನತೊಡಗಿತು. ಅದರ ಕಡುಕಪ್ಪು ಬಿಸಿಲಿಗೆ ಹೊಳೆಯುತ್ತಲಿತ್ತು. ಕೃಷ್ಣಾರೆಡ್ಡಿ ಗೊಣಗುತ್ತಾ ಮತ್ತೆ ಅದರ ಕಡೆ ಬೀಸಿದ. ರಂಗಜ್ಜಿ 'ಇರ್ಲಿ ಬಿಡೋ... ಊರಂದ್ಮೇಕೆ ಕಾಗಿ ಗುಬ್ಬಿ ಇಲ್ದೆ ಇರಕ್ಕಾಯ್ತದ. ಯಾರೋ ನೆಂಟ್ರು ಬರ್ತ್ವೇದು. ವೋಗಿ ನಿನ್ನೆಣ್ತೀಗೆ ಪಾಯ್ಸ ಮಾಡಕ್ಕೇಳು' ಎಂದು ಕಣ್ಣು ಮುಚ್ಚಿಕೊಂಡೇ ನುಡಿದಳು. 'ಪಾಯ್ಸ ಬೇಕಿರೋದು ನಿನಕೋ ನೆಂಟರ್ಗೋ... ಏನ್ ಬಾಳಾ ನೆಂಟರ್ನ ಇಟ್ಟಿದ್ದಿ. ಒಂದು ಕಸ್ಟಕ್ಕಾಗಲ್ಲ, ಪಾಯ್ಸ ತಿನ್ಕಂಡೋಯ್ತಾರಂತೆ' ಎಂದು ವದರಿಕೊಳ್ಳುತ್ತಾ ಒಳನಡೆದ ಕೃಷ್ಣಾರೆಡ್ಡಿ ಅದೇ ವೇಗದಲ್ಲಿ ಅಚೆ ಬಂದು ಊರ ನಡುವಿನ ಕವಲೊಂದರಲ್ಲಿ ಧಿಮಿಗುಟ್ಟುತ್ತಾ ನಡೆಯತೊಡಗಿದ.

ನೆಂಟರು ಎಂದರೆ ಅವಳಿಗೆ ಮೊದಲು ನೆನಪಿಗೆ ಬರುವುದೆ ಚಿಕ್ಕಪ್ಪ. ನಂತರ ಗಂಡ ತಿಮ್ಮರಾಯ. ಚಿಕ್ಕಪ್ಪನ ಮುಖ ನೆನಪಿಗೆ ಬಂದರೆ ಈಗಲೂ ಅವಳು ಬೆಚ್ಚಿಬೀಳುತ್ತಾಳೆ. ಎದೆ, ಸೆರಗು ಎಲ್ಲವೂ ಸರಿ ಇದೆಯೆ ಎಂಬಂತೆ ಒಮ್ಮೆ ನೋಡಿಕೊಳ್ಳುತ್ತಾಳೆ. ಅವನ ವರಸೆಯೆ ಹಾಗಿತ್ತು. ಊರ ಎಲ್ಲ ಹೆಣ್ಣುಗಳನ್ನು ಅನುಭವಿಸಿಯೆ ತೀರಬೇಕೆಂಬ ಹಟ ತೊಟ್ಟಂತೆ ಬೀದಿಗಳಲ್ಲಿ ಅಡ್ಡಾಡುತ್ತಾನೆ ಎಂದು ತನ್ನ ಚಿಕ್ಕಂದಿನ ದಿನಗಳಲ್ಲೆ ಕೇಳಿದ್ದಳು. ಅವಳಿಗೆ ಆಗಿನ್ನೂ ಹತ್ತು ವರ್ಷ ತುಂಬಿರಲಿಲ್ಲ. ರಂಗಜ್ಜಿಯ ಅಪ್ಪ ಅಮ್ಮ, ಅವಳ ಚಿಕ್ಕಪ್ಪನ ಹೆಂಡತಿ ಎಲ್ಲರೂ ಪಕ್ಕದೂರಿನ ಜಾತ್ರೆಗೆ ಹೋಗಿದ್ದರು. ಅಂದು ರಾತ್ರಿ ರಂಗಜ್ಜಿ ಮತ್ತು ಅವಳ ಚಿಕ್ಕಪ್ಪ ಇಬ್ಬರೇ ಉಳಿದುಕೊಳ್ಳಬೇಕಾಯಿತು. ಖುಷಿಯಲ್ಲೆ ಇದ್ದ ಅಡುಗೆಯನ್ನು ತಿಂದು ಚಿಕ್ಕಪ್ಪನ ಜೊತೆ ನಗುನಗುತ್ತಾ ಒಂದಷ್ಟು ಮಾತಾಡಿ ಚಾಪೆಯ ಮೇಲೆ ಹೊರಳಿ ನಿದ್ದೆಗೆ ಜಾರಿದ್ದಳು. ಒಂದು ಹೊತ್ತಿನಲ್ಲಿ ಮೈಮೇಲೆ ಏನೋ ಸರಿದಾಡಿದಂತಾಗಿ ಗಾಬರಿಯಲ್ಲಿ ಕಣ್ಣುಬಿಟ್ಟವಳಿಗೆ ಆ ಮಬ್ಬಿನಲ್ಲಿ ಕಂಡದ್ದು ಚಿಕ್ಕಪ್ಪನ ಮುಖ. ಎಷ್ಟೇ ಬೇಡಿಕೊಂಡರೂ ಕೊಸರಾಡಿದರೂ ಪಟ್ಟುಬಿಡದ ಅವನು ಅಂದು ಅವಳನ್ನು ಆಳವಾಗಿ ಗಾಸಿಗೊಳಿಸಿಯೆ ಪಕ್ಕಕ್ಕೆ ಹೊರಳಿದ್ದು. ಜೊತೆಗೆ ಯಾರಲ್ಲಿಯಾದರೂ ಹೇಳಿದರೆ ಕತ್ತು ಹಿಸುಕಿ ಬಾವಿಗೆ ತಳ್ಳಿಬಿಡುವೆ ಎಂಬಂತೆ ಹೆದರಿಸಿ ಮತ್ತೆ ಮೇಲೆರಗಿ ಗಾಸಿಗೊಳಸಿದ್ದ. ಅಂದೇ ಅವಳಲ್ಲಿ ಪುಟಿಯುತ್ತಿದ್ದ ಲವಲವಿಕೆ, ಉತ್ಸಾಹ ಮುರುಟಿಕೊಂಡು ಸುಟ್ಟ ನೆಲದ ಗರುಕೆಯಂತೆ ಖಿನ್ನಗೊಂಡಳು. ಎಷ್ಟೋ ಬಾರಿ